## ಬದುತ್ತದ ಹೊಲಿಗೆ

ಸುಡುಬಿಸಿಲಿನ ಮಧ್ಯಾಹ್ನದಲ್ಲಿ ಮೈಮೇಲೆ ದಪ್ಪನೆಯ ಕೌದಿ ಹಾಕಿಕೊಂಡದ್ದಕ್ಕೆ ಬಂದ ಬೆವರಿಗೆ ರೇಜಿಗೆಯಾದರೂ ಸಹನೆ ಕಳೆದುಕೊಳ್ಳದೆ, ಕೂತಲ್ಲೇ ಕೂತು ಕೆಲಸ ಮಾಡಿದ್ದರಿಂದ ಮೈಯ ಉಷ್ಣ ಹೆಚ್ಚಾಗಿ ಸಂಜೆಗೆ ಕೈಕಾಲು ನೋವಿನಿಂದ ಸೆಳೆದರೂ ಸಿಡುಕದೆ, ಹೆಂಗಸರೆಲ್ಲಾ ನಿರಂತರ ಶ್ರಮ ಹಾಕಿದರೆ ಕೊನೆಗೊಮ್ಮೆ ಚಂದದ ಕೌದಿ ಅರಳುತ್ತದೆ. ಅದು ದಿನದಿಂದ ದಿನಕ್ಕೆ ಶುಕ್ಲಪಕ್ಷದ ಚಂದ್ರನಂತೆ ರೂಪ ಪಡೆಯುತ್ತಾ ಬಂದಂತೆಲ್ಲಾ ಪಟ್ಟ ಪಾಡೆಲ್ಲವೂ ಹಾಡಾಗಿ ಸುಂದರವೆನ್ನಿಸತೊಡಗುತ್ತದೆ. ಕಠಿಣ ಪರಿಶ್ರಮವಿಲ್ಲದೆ ಕಲಾಕೃತಿ ಮೂಡುವುದಾದರೂ ಹೇಗೆ?

ಆದರೆ ಈ ಕಲಾಕೃತಿ ಮಾಡುವ ಹೆಂಗಸರ ಉತ್ಸಾಹ ಗಂಡಸರಿಗೆ ಕಾಲಹರಣದಂತೆ ಕಾಣುತ್ತದೆ. ಆದ್ದರಿಂದಲೇ 'ಯಾವಾಗ ನೋಡಿದ್ರೂ ಅರಿವಿಗಂಟು ಮುಂದಿಟ್ಟುಕೊಂಡು ಕೂಡ್ತಾರೆ. ಸಾಕು ನಿಲ್ಲಿಸ್ರಬೇ. ಸ್ವಲ್ಪ ಮನಿ ಕೆಲಸ ನೋಡಿಕೊಳ್ರಿ...' ಎಂದು ಹೇಳಿ ಅವರ ಉತ್ಸಾಹದ ಗರಿಕೆಯನ್ನು ಕಾಲಿನಿಂದ ತುಳಿಯುತ್ತಾರೆ. ಹಾಗೆ ಅವರು ತುಳಿದು ಅತ್ತ ಹೋದ ತಕ್ಷಣ ಆ ಗರಿಕೆ ಮತ್ತೆ ಮೈಕೊಡವಿಕೊಂಡು ಎದ್ದು ಸೆಟೆದು ನಿಲ್ಲುವಂತಹ ಉತ್ಸಾಹ ಹೆಂಗಸರದ್ದು. ತುಳಿಸಿಕೊಂಡ ಸಿಟ್ಟಿನ ಕಾರಣಕ್ಕೋ ಏನೋ, 'ಗಂಡಸರ ಧೋತ್ರ ಕೌದಿಗೆ ಅಷ್ಟು ಛಂದ ಹೊಂದಂಗಿಲ್ಲರೀ... ಜಲ್ದಿ ಹೊಲ್ಸು ಆಗ್ತವೆ... ಕೌದಿಗೆ ಹೆಂಗಸರ ಸೀರೀನೆ ಛಂದ' ಎಂದು ಮೂಗಿನ ನತ್ತು ತಿರುಗಿಸುತ್ತಾ ಹಲವು ಹೆಂಗಸರು ಹೇಳಿದಾಗ ನಗು ಬಂದಿತ್ತು.

ಹಾಗೆ ನೋಡಿದರೆ ಕೌದಿಯ ತಯಾರಿಯಲ್ಲಿ ಗಂಡಸರ ಪಾತ್ರವೇ ಇಲ್ಲ. ರಂಗೋಲಿಯನ್ನು ಗಂಡಸರು ಅಂಗಳದಲ್ಲಿ ಹಾಕಬಾರದು ಎನ್ನುವ ರೂಢಿಯಂತೆ, ಕೌದಿ ಹೊಲಿಯುವುದಕ್ಕೂ ಗಂಡಸರು ಕೈ ಹಾಕುವುದಿಲ್ಲ. ಅದು ಏನಿದ್ದರೂ ಹೆಂಗಸರ ಕೆಲಸ. ಯಾರಾದರೂ ಗಂಡಸರು ಅಪರೂಪಕ್ಕೆ ಕೌದಿಯ ಬಣ್ಣಕ್ಕೆ ಮನಸೋತು ಅದರ ಹೊಲಿಗೆಯಲ್ಲಿ ಕೈಹಾಕಿದರೆ ಉಳಿದ ಗಂಡಸರು 'ಹೆಣ್ಣಿಗ...' ಎಂದು ಕರೆಯಲು ಶುರು ಮಾಡುತ್ತಾರೆ. ಒಟ್ಟಾರೆ ಕೌದಿಯಂತಹ ಕೌದಿಗೂ ಲಿಂಗ ತಾರತಮ್ಯ ಬಂದುಬಿಟ್ಟಿದೆ. ಆದರೆ ಆಶ್ವೀಜ ಮಾಸದಲ್ಲಿ ಮಹಾನವಮಿ ಬಂದಾಗ ಕೌದಿಗಳೆಲ್ಲವನ್ನೂ ಕಡ್ಡಾಯವಾಗಿ ಒಗೆದು ಸ್ವಚ್ಛ ಮಾಡುವುದಕ್ಕೆ ಮಾತ್ರ ಗಂಡಸರ ಸಹಾಯ ಬೇಕು. ಮೊದಲೇ ನಾಲ್ಕೈದು ಪದರಗಳ ಹೊಲಿಗೆಯಿಂದ ಕೂಡಿದ ಕೌದಿಯನ್ನು ನೀರಿನಲ್ಲಿ ಅದ್ದಿದರೆ ಸಾಕು, ಹೆಣಭಾರವಾಗುತ್ತದೆ. ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಹಳ್ಳ–ನದಿಗಳು ತುಂಬಿ ಹರಿಯುತ್ತಿರುತ್ತವೆ. ಆ ಹೊತ್ತಿನಲ್ಲಿ ನಾಲ್ಕಾರು ಗಂಡಸರು ಮನೆಯ ಕೌದಿಗಳನ್ನು ನೀರಿನ ಬಳಿ ಒಯ್ದು, ಎಲ್ಲರೂ ಸೇರಿ ಒಗೆಯುತ್ತಾರೆ. ಒದ್ದೆ ಕೌದಿಯನ್ನು ಎತ್ತಿ ಒಗೆಯುವುದಕ್ಕೆ ಸಾಧ್ಯವಿಲ್ಲದ ಕಾರಣ, ಕಟ್ಟಿಗೆಯಿಂದ ಅದನ್ನು ಕುಟ್ಟಿಯೋ, ಕಾಲಿನಿಂದ ತುಳಿದೋ ಅದರ ಕೊಳೆಯನ್ನು ತೆಗೆಯುತ್ತಾರೆ. ಒಗೆದ ಮೇಲೆ ಅದನ್ನು ಹಿಂಡುವಾಗಂತೂ ನಾಲ್ಕು ಜನ ಗಂಡಸರಿಗೂ ಕಷ್ಟವಾಗುತ್ತದೆ. ಆದ್ದರಿಂದ ಕೌದಿಗೆ ಏನಾದರೂ ಹೊಲಸು ಹತ್ತಿದರೆ ವರ್ಷದ ತನಕ ಅದು ಸ್ವಚ್ಛವಾಗುವುದಕ್ಕೆ ಕಾಯಬೇಕು. 'ಕೌದಿಗೆ ಹತ್ತಿದ್ದು ಅಷ್ಟು ಸುಲಭಕ್ಕೆ ಹೋಗಲ್ಲ' ಎನ್ನುವ ನಾಣ್ನುಡಿ ಆದ್ದರಿಂದಲೇ ಮೂಡಿರಬೇಕು.



ಕರಿಯ ಕಂಬಳಿ ಹೇಗೆ ಪೂಜೆ–ಶಾಸ್ತ್ರ–ಸಂಪ್ರದಾಯದ ಕೆಲಸಗಳಲ್ಲಿ ಬಳಕೆಯಾಗುತ್ತದೆಯೋ ಹಾಗೆ ಕೌದಿಗೆ ಪವಿತ್ರದ ಸ್ಥಾನವಿಲ್ಲ. ಮೊದಲೇ ಹಳೆಯ ಬಳಸಿದ ಬಟ್ಟೆಯ ತುಂಡುಗಳು, ಜೊತೆಗೆ ನೂರಾರು ಹೊಲಿಗೆ ಹಾಕಿಸಿಕೊಂಡು ತಯಾರಾದ ಕೂಡುವಸ್ತ್ರ. ಏಕವಸ್ತ್ರವನ್ನೇ ಪವಿತ್ರವೆಂದು ನಂಬಿಕೊಂಡು ಬಂದ ಭಾರತೀಯರು ಕೌದಿಯನ್ನು ಧಾರ್ಮಿಕ ಸಂಗತಿಗಳ ಜೊತೆಗೆ ತಳುಕು ಹಾಕುವುದಿಲ್ಲ. ಆದರೆ ಕೌದಿಯ ಮೇಲಿನ ಹೆಂಗಸರ ಪ್ರೀತಿ ಅದೆಲ್ಲವನ್ನೂ

### ಕೊಚ್ಚಿಯಲ್ಲಿ ಕೌದಿ

JLX Studio ಹೆಸರಿನ, ಬೆಂಗಳೂರಿನ ಡಿಸೈನ್ ಸ್ಟುಡಿಯೊ ತಂಡದವರು ಕಳೆದ ಒಂದು ವರ್ಷದಿಂದ ಕೌದಿಗಳ ಅಧ್ಯಯನದಲ್ಲಿ ತೊಡಗಿದ್ದು, ಈ ಪ್ರಬಂಧದ ಲೇಖಕರು ಆ ತಂಡದ ಭಾಗವಾಗಿದ್ದರು. 2022ರ ಡಿಸೆಂಬರ್ ತಿಂಗಳ ಕೊನೆಯಲ್ಲಿ ಕೊಚ್ಚಿಯಲ್ಲಿ 'ಸ್ಟಿಚ್ ಬೈ ಸ್ಟಿಚ್' ಎನ್ನುವ ಹೆಸರಿನ ಕಲಾಪ್ರದರ್ಶನ ಆರಂಭವಾಗಿದ್ದು, ಈ ಪ್ರದರ್ಶನ ಹಾಗೂ ಚರ್ಚೆ ಒಂದು ತಿಂಗಳ ಕಾಲ ನಡೆಯಲಿದೆ.